ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಹೆಸರು ಇಡುವ ಬಗ್ಗೆ ಹೇಳುವುದಾದರೆ, ಡೊನೇಟ್ ಮಾಡಿರುವವರ ಅಜ್ಜಿಯ ಹೆಸರನ್ನು ಇಡಬೇಕೆಂದು ಹೇಳಿದ್ದಾರೆ. ಅದಕ್ಕೆ ಅಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಅಧಿಕಾರಿಗಳಿಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದರೆ ತಕ್ಷಣ ಅದನ್ನು ಕಾರ್ಯರೂಪಕ್ಕೆ ತರುತ್ತೇವೆ.

ವಿಮಾ ಕಛೇರಿಯ ಪ್ರಾರಂಭ

197 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ವಿಮಾ ಇಲಾಖೆಯನ್ನು ಪುನರ್ ರಚಿಸುವ ಉದ್ದೇಶ ಸರ್ಕಾರದವರಲ್ಲಿದೆಯೆ?

ಆ) ಶಿವಮೊಗ್ಗ ನಗರದಲ್ಲಿ ವಿಭಾಗೀಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರ್ಕಾರದವರು ಪರಿಶೀಲಿಸುವರೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಶಿವಮೊಗ್ಗ ನಗರದಲ್ಲಿ ವಿಭಾಗೀಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಸರ್ಕಾರಿ ವಿಮಾ ಇಲಾಖೆಯನ್ನು ಪುನರ್ ರಚಿಸುವ ಉದ್ದೇಶ ಸರ್ಕಾರದಲ್ಲಿದೆಯೇ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದಾರೆ. ಆದರೆ ಶಿವಮೊಗ್ಗದಲ್ಲಿ ಕಛೇರಿಯ ಉದ್ಘಾಟನಾ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾವು ಇದನ್ನು ಮಾಡುತ್ತೇವೆಂದು ಹೇಳಿದ್ದರು. ಇದನ್ನು ಪುನರ್ ರಚನೆ ಮಾಡುತ್ತೇವೆ, ಇದರ ಬಗ್ಗೆ ಏನೇನು ಪ್ರಯತ್ನ ಬೇಕು ಮಾಡಿಸುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಏನೇನು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದಾರೆ. ಎರಡನೆಯದು ಶಿವಮೊಗ್ಗ ನಗರದಲ್ಲಿ ವಿಭಾಗೀಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರ್ಕಾರದವರು ಪರಿಶೀಲಿಸುವರೇ? ಎಂದು ಕೇಳಿದ್ದೆ. ಅದಕ್ಕೆ ಉತ್ತರ ಪರಿಶೀಲನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಇನ್ನು ಒಂದು ವರ್ಷದಲ್ಲಿ ಈ ಎಲ್ಲಾ ಕಾರ್ಯಗಳನ್ನು ಮುಗಿಸಿ ಕೊಡುತ್ತೇವೆಂದು ಹೇಳಿದ್ದರು. ನಾನು ತಮ್ಮ ಮುಖಾಂತರ ನೇರವಾಗಿ ಸರ್ಕಾರವನ್ನು ಕೇಳಬಯಸುತ್ತೇನೆ. ಈ ವಿಮಾ ಇಲಾಖೆಯನ್ನು ಪುನರ್ ರಚಿಸುವ ಬಗ್ಗೆ ಏನಾದರೂ ಪ್ಲಾನ್ ಇದೆಯೋ? ಎರಡನೆಯದಾಗಿ ಶಿವಮೊಗ್ಗ ನಗರದಲ್ಲಿ ವಿಭಾಗಿಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ

ಏನಾದರೂ ಪ್ಲಾನ್ ಎಸ್ಟಿಮೇಟ್ ಇದೆಯೇ? ಇದಕ್ಕೆ ಹಣವನ್ನು ಏನಾದರೂ ಇಟ್ಟಿದ್ದೀರೋ ಇದಕ್ಕೆ 1998-99 ರಲ್ಲಿ ಏನಾದರೂ ಪ್ರಯತ್ನ ಮಾಡುತ್ತೀರೋ ನೀವು ಪರಿಶೀಲನೆ ಎಂದರೆ ಇದರ ಆಯಸ್ಸು ಎಷ್ಟು? ಯಾವಾಗ ಇದನ್ನು ಪ್ರಾರಂಭ ಮಾಡುತ್ತೀರಿ? ಯಾವಾಗ ಮುಗಿಸುತ್ತೀರಿ?

ಡಾ|| ಹೆಚ್.ಸಿ. ಮಹದೇವಪ್ಪ (ಉಪ ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಶಿವಮೊಗ್ಗದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪತ್ರಿಕಾ ಹೇಳಿಕೆಯನ್ನು ಕೊಡುವಂತಹ ಸಂದರ್ಭದಲ್ಲಿ ಒಂದು ವಿಮಾ ಇಲಾಖೆಯನ್ನು ಈ ಭಾಗದಲ್ಲಿ ತೆಗೆಯುತ್ತೇವೆಂದು ಹೇಳಿದ್ದಾರೆ. ಆದರೆ ಈಗಾಗಲೇ ವಿಮಾ ಇಲಾಖೆಗಳು ರಾಜ್ಯದ ನಾಲ್ಕು ರೆವಿನ್ಯೂ ವಿಭಾಗಗಳಲ್ಲಿ ಮತ್ತು ತುಮಕೂರು ವಿಭಾಗಗಳಲ್ಲಿ ಕಾರ್ಯವನ್ನು ಪ್ರಾರಂಭ ಮಾಡುತ್ತಿವೆ. ಬಹುತೇಕ ಜನರು ನಾನ್-ಗೆಜೆಟೆಡ್ ಆಫೀಸರ್‌ಗಳು ಶಿವಮೊಗ್ಗದಲ್ಲಿ ಅವರಿಗೆ ಬೇಕಾದಂತಹ ವಿಮಾ ಯೋಜನೆಗಳನ್ನು ಪಡೆಯುತ್ತಿದ್ದಾರೆ. ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಗೆಜೆಟೆಡ್ ಆಫೀಸರ್ಸ್ ಮಾತ್ರ ತುಮಕೂರುನಲ್ಲಿರುವಂತಹ ವಿಮಾ ಕಛೇರಿಯಲ್ಲಿ ಈ ಸೌಲಭ್ಯವನ್ನು ಪಡೆಯುವಂತಹ ಕಾರ್ಯ ಇದೆ. ಮಾನ್ಯ ಮುಖ್ಯ ಮಂತ್ರಿಯವರು ಹೇಳಿಕೆಯನ್ನು ನೀಡಿರುವುದರಿಂದ ಅಲ್ಲಿ ಒಂದು ವಿಭಾಗ ಕಛೇರಿಯನ್ನು ತೆರೆಯಬೇಕೆಂಬ ಉದ್ದೇಶವನ್ನು ವ್ಯಕ್ತ ಮಾಡಿರುವುದರಿಂದ ಸರ್ಕಾರ ಅಲ್ಲಿ ವಿಮಾ ಕಛೇರಿಯನ್ನು ತೆರೆಯಬೇಕೆಂದು ಪರಿಶೀಲನೆ ಮಾಡುವಂಥಾದ್ದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಕೇಳುವಂಥಾದ್ದು ಅದನ್ನೇ ಯಾವಾಗ ಮಾಡುತ್ತೀರಿ? ಈ ಪ್ರಶ್ನೆ ಬಂದಿರುವಂಥಾದ್ದು ಸನ್ಮಾನ್ಯ ಮುಖ್ಯಮಂತ್ರಿಯವರು ಕಟ್ಟಡ ಉದ್ಘಾಟನೆಯನ್ನು ಮಾಡುವಂತಹ ಸಂದರ್ಭದಲ್ಲಿ ಎರಡು ವರ್ಷಗಳ ಹಿಂದೆ ಹೇಳಿದರು. ಇದನ್ನು ಒಂದು ವರ್ಷದಲ್ಲೇ ಮುಗಿಸುತ್ತೇವೆಂದು ಹೇಳಿದ್ದಾರೆ. ನೀವು ಉತ್ತರದಲ್ಲಿ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ಆದುದರಿಂದ ಈ ವಿಷಯವಾಗಿ ಏನು ಸ್ಥಿತಿಯಲ್ಲಿದೆ, ಇದಕ್ಕೆ ಏನಾದರೂ ಹಣವನ್ನು ಬಿಡುಗಡೆ ಮಾಡುತ್ತೀರಾ?

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಉತ್ತರ ಹೇಳಿದ್ದೇನೆ. ಶಿವಮೊಗ್ಗದಲ್ಲಿ ಯಾವುದೇ ತೊಂದರೆ ಇಲ್ಲದೆ ರೀತಿಯಲ್ಲಿ ಬಹುತೇಕ ಜನರಿಗೆ ನಾನ್ ಗೆಜೆಟೆಡ್ ಆಫೀಸರ್ಸ್‌ಗಳಿಗೆ ವಿಮಾ ಸೌಲಭ್ಯ ಮತ್ತು ಎಲ್ಲಾ ಸವಲತ್ತುಗಳು ಸಿಗುತ್ತಾ ಇದೆ. ಅತ್ಯಂತ ಕಡಿಮೆ ಇರುವಂತಹ ಗಜೆಟೆಡ್ ಅಧಿಕಾರಿಗಳಿಗೆ ಅನಾನುಕೂಲವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಅಲ್ಲಿ ಹೇಳಿರುವುದರಿಂದ ಇನ್ನು ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ಡೀಟೈಲ್ ಎಸ್ಟಿಮೇಟ್ ಆಗಲಿ, ಹಣಕಾಸನ್ನು ಒದಗಿಸುವಂತಹ ವಿಷಯವಾಗಲಿ, ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಅಲ್ಲಿ ಹೇಳಿರುವುದರಿಂದ ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತಾ ಇದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಕಾಂಟ್ರೋವರ್ಸಿಯಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದರಿಂದ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲವೆಂದು ಉತ್ತರವನ್ನು ಕೊಟ್ಟರೆ ಏನು ಹೇಳಲಿ?

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ನಾವು ಯಾವಾಗ ತೆಗೆದುಕೊಳ್ಳಬೇಕು, ಏನು ಮಾಡಬೇಕೆಂಬ ಬಗ್ಗೆ ಇನ್ನು ನಿರ್ಧಾರ ಮಾಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಕನಿಷ್ಟ ಈ ವರ್ಷವಾದರೂ ಮಾಡುತ್ತೀರಾ ಎಂಬುದನ್ನು ಹೇಳಬೇಕು.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇ -ವೆನ್ನುವುದನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸ ಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಪರಿಶೀಲನೆ ಎಂದರೆ ಏನರ್ಥ? ಇದು ಆಗುತ್ತದೆಯೋ, ಇಲ್ಲವೊ, ಎಂಬುದನ್ನು ಹೇಳಿ. ಆಗುವುದಿಲ್ಲವೆಂದರೆ ಆಗುವುದಿಲ್ಲವೆಂದು ಹೇಳಿ. ನೀವು ಹೇಳುವುದು ಒಂದು, ಮಾನ್ಯ ಮುಖ್ಯಮಂತ್ರಿಯವರು ಹೇಳುವುದು ಒಂದು ರೀತಿಯಾದರೆ ಹೇಗೆ? ಆಗುವುದಿಲ್ಲವೆಂದರೆ ಆಗುವುದಿಲ್ಲವೆಂದು ಹೇಳಿ.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಕಛೇರಿಯನ್ನು ತೆಗೆಯುವುದಕ್ಕೆ ಏನು ಬೇಕೆಂಬ ಬಗ್ಗೆ ಎಲ್ಲಾ ವಿವರಗಳನ್ನು ವರ್ಕ್‌ಔಟ್ ಮಾಡಬೇಕಾಗುತ್ತದೆ. ಅದಕ್ಕೆ ನಾವು ಅದನ್ನು ಪರಿಶೀಲನೆ ಮಾಡಿ, ವರ್ಕ್ ಔಟ್ ಮಾಡಿ ಪ್ರಾರಂಭ ಮಾಡುವುದಕ್ಕೆ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತಾ ಇದ್ದೇವೆ. ಈಗಾಗಲೇ ತಕ್ಷಣ ತೆಗೆಯದಿರುವುದರಿಂದ ಅಲ್ಲಿ ಆಕಾಶವೇನೂ ಬಿದ್ದು ಹೋಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಡಬೇಕಾದರೆ ಆಕಾಶವೇನೂ ಬಿದ್ದು ಹೋಗಿರಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ದೊಡ್ಡ ಸಾರ್ವಜನಿಕ ಸಭೆಯಲ್ಲಿ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಹೇಳಬೇಕಾದರೆ ಆಗ ಆಕಾಶ ಬಿದ್ದು ಹೋಗಿತ್ತಾ?

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ವಿಮಾ ವಿಭಾಗ ಕಛೇರಿಯನ್ನು ಪ್ರಾರಂಭ ಮಾಡುವುದಕ್ಕೆ ಡೀಟೈಲ್ಸ್ ವರ್ಕ್‌ಔಟ್ ಮಾಡಿ ಅದರ ಸಾಧಕ-ಭಾಧಕಗಳನ್ನು ನೋಡಿಕೊಂಡು ಅಲ್ಲಿ ಈ ಕಛೇರಿಯನ್ನು ತೆಗೆಯುವಂಥಾದ್ದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆ.

ಕ್ರೀಡಾಪಟುಗಳಿಗೆ ಪ್ರೋತ್ಸಾಹ

198 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿರುವ ಕ್ರೀಡಾ ಪಟುಗಳ ಸಂಖ್ಯೆ ಎಷ್ಟು? ಮತ್ತು ಅದರ ವಿವರಗಳೇನು?*

ಆ) *ರಾಜ್ಯದಲ್ಲಿ ಕ್ರೀಡೆ ಮತ್ತು ಕ್ರೀಡಾ ಪಟುಗಳನ್ನು ಪ್ರೋತ್ಸಾಯಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಇದಕ್ಕೆ ಎಷ್ಟು ಅನುದಾನ ನೀಡಿದೆ? ಎಷ್ಟು ಖರ್ಚು ಮಾಡಿದೆ?*